# ತಮ್ಮ ದಾರಿ ತಾವೇ ನಡೆದು...



ಸ್ವಯಂಪ್ರಭಾ

ಪಿಯುಸಿ ಕೋಚಿಂಗ್ ಕ್ಲಾಸ್‌ಗೆ ಮಕ್ಕಳನ್ನು ಸೇರಿಸುವುದು ಎಂದರೆ ಅದೊಂದು ವಿಭಿನ್ನ ಅನುಭವ. ಮೊದಲ ಪಿಯುಸಿ ಮುಗಿಯುವ ಮುನ್ನ, ಅಂದರೆ ಡಿಸೆಂಬರ್‌ನಿಂದಲೇ ಪೋಷಕರು ಕೋಚಿಂಗ್ ಕ್ಲಾಸ್‌ಗಳಿಗೆ ಭೇಟಿ ನೀಡಿ ಅಲ್ಲಿ ಪಾಠ ಮಾಡುವ ವಿಧಾನ, ಸಿಇಟಿ ಸೇರಿದಂತೆ ಯಾವೆಲ್ಲ ಪರೀಕ್ಷೆಗಳನ್ನು ಬರೆಯಲು ವಿದ್ಯಾರ್ಥಿಗಳನ್ನು ಸಿದ್ಧಪಡಿಸುತ್ತಾರೆ ಎಂಬ ಮಾಹಿತಿಯನ್ನು ಅರಿತುಕೊಳ್ಳುತ್ತಾರೆ. ಕೋಚಿಂಗ್‌ಗೋಸ್ಕರ ಮಕ್ಕಳ ಜೊತೆಗೆ ತಾವೂ ಪ್ರಯಾಣಿಸಿ ಮೂರು ತಿಂಗಳ ಮಟ್ಟಿಗೆ ಬಾಡಿಗೆ ಮನೆ ಹಿಡಿದು, ಮಕ್ಕಳಿಗೆ ಏನೂ ತೊಂದರೆಯಾಗದಂತೆ ನೋಡಿಕೊಳ್ಳುವ ಪಾಲಕರೂ ಇದ್ದಾರೆ.

ಕೋಚಿಂಗ್ ಕ್ಲಾಸ್‌ನವರೂ ಪಾಲಕರಿಗೆಂದೇ ಒಂದು ಪ್ರತ್ಯೇಕ ತರಗತಿ ತೆಗೆದುಕೊಳ್ಳುತ್ತಾರೆ. ಪಾಠ ಪ್ರವಚನಗಳ ವಿನ್ಯಾಸ, ಪರೀಕ್ಷೆಗಳು ಮತ್ತು ಓದುವ ಕ್ರಮದ ಬಗ್ಗೆ ಹೇಳುತ್ತಾರೆ. ಓದುವ ಎಲ್ಲ ವಿಚಾರಗಳನ್ನು ಫೀಸು ಕೊಟ್ಟು ನೀವು ನಮ್ಮ ತಲೆಗೆ ಕಟ್ಟಬಹುದು. ಆದರೆ ಓದುವ ಕೆಲಸವನ್ನು ನಿಮ್ಮ ಮಕ್ಕಳೇ ಮಾಡಬೇಕಾಗುತ್ತದೆ ಎಂದು ಕಿವಿಮಾತು ಹೇಳುತ್ತಾರೆ. ಹೆಚ್ಚಿನ ಪೋಷಕರು, ಉಪನ್ಯಾಸಕರನ್ನು ಮತ್ತೆ ಸಂಪರ್ಕಿಸಿ, 'ದಯವಿಟ್ಟು ಮಗನಿಗೆ/ಮಗಳಿಗೆ ಮೊಬೈಲ್ ಬಳಸಬೇಡಿ ಎಂದು ಬುದ್ಧಿ ಹೇಳಿ' ಎಂದು ಮನವಿ ಮಾಡುತ್ತಾರೆ. 'ಅವನಿಗೆ ಬೈಕ್ ಓಡಿಸಬಾರದೆಂದು ಹೇಳಿ, ಮೇಡಂ ಮಗಳಿಗೆ ಸ್ವಲ್ಪ ವಿಡಿಯೊ ನೋಡುವುದನ್ನು ಕಡಿಮೆ ಮಾಡಲು ಹೇಳಿ... ನೀವು ಹೇಳಿದ್ರೆ ಅವಳು ಕೇಳ್ತಾಳೆ...' ಇಂತಹ ಕೋರಿಕೆಗಳನ್ನು ಉಪನ್ಯಾಸಕರ ಮುಂದೆ ಮಂಡಿಸುತ್ತಾರೆ. ಹೀಗೆ ಮಕ್ಕಳ ಜವಾಬ್ದಾರಿಯನ್ನು ತಮ್ಮ ಹೆಗಲಿನಿಂದ ವರ್ಗಾಯಿಸುವ ಕೆಲಸ ಬಹಳ ಚಿಕ್ಕಂದಿನಿಂದಲೇ ಆರಂಭವಾಗಿರುತ್ತದೆ. ಪ್ರತ್ಯೇಕ ಡಬ್ಬಿಗಳಲ್ಲಿ ಆಹಾರವನ್ನು ತುಂಬಿ, ನೀರು, ಹಾಲು ಮತ್ತು ಔಷಧಿಗಳನ್ನು ತುಂಬಿ ಅವನ್ನು ಡೇ ಕೇರ್ ಸೆಂಟರ್‌ನಲ್ಲಿ ಬಿಡುವ ಕ್ಷಣದಿಂದ ಶುರುವಾಗುತ್ತದೆ. ತಾಯ್ತಂದೆಯರ ಅವಶ್ಯಕತೆಗಳು, ಅನಿವಾರ್ಯತೆಗಳಿಂದಾಗಿ ಇಂತಹ ಪರಿಸ್ಥಿತಿ ಸೃಷ್ಟಿಯಾಗುತ್ತದೆ ಎಂದಿಟ್ಟುಕೊಳ್ಳೋಣ. ಯಾವುದೇ ವಿಚಾರವಾಗಲೀ, ಹಲವು ಬಾರಿ ಪುನರಾವರ್ತನೆಯಾದಾಗ ಅದುವೇ ಅಭ್ಯಾಸವಾಗುತ್ತದೆಯಲ್ಲವೆ?

***

ಕಾರಣಗಳೇನೇ ಇರಲಿ, ಮನೆಯೊಳಗೆ ಕಲಿಕೆ ಎನ್ನುವ ಪರಿಕಲ್ಪನೆ ತೆಳುವಾಗಲು ಶುರುವಾಗಿ ಬಹಳ ಕಾಲವಾಯಿತು. ಮನೆಯೊಳಗೆ ಸಮಯ ಕಳೆಯುವ ವಿಧಾನಗಳೂ ಮರೆತು ಹೋಗಿವೆ ಎಂಬ ವಿಚಾರ ಮತ್ತೀಗ ಅರಿವಿಗೆ ಬರಲು ಕಾರಣ ಪ್ರಸಕ್ತ ಲಾಕ್‌ಡೌನ್. ಅಪ್ಪನನ್ನು ನಿಯಂತ್ರಿಸುವ ಆಫೀಸು ಎಂಬ ಸೂತ್ರವಿಲ್ಲ, ಅಮ್ಮನನ್ನು ನಿಯಂತ್ರಿಸುವ ಆಫೀಸಾಗಲೀ ಸ್ಕೂಲಾಗಲೀ ಇಲ್ಲ. ಎಲ್ಲರೂ ಮನೆಯೊಳಗೇ ಒಂದ್ನಾಲ್ಕು ದಿನ ಆರಾಮಗಿ ಇದ್ದಿದ್ದಾಯಿತು. ಮುಂದೇನು ಎಂಬ ಪ್ರಶ್ನೆಯೊಂದಿಗೆ ಇನ್ನೂ ಬಿದ್ದಿವೆ ಹಲವು 'ಖಾಲಿ' ದಿನಗಳು.

ಅಷ್ಟರಲ್ಲಿ ಕೋಚಿಂಗ್‌ನಿಂದ ಫೋನ್: 'ಆನ್‌ಲೈನ್ ಪಾಠಗಳು ಶುರು ಮಾಡುತ್ತಿದ್ದೇವೆ. ನಿಮ್ಮ ಮಗ, ತರಗತಿಯನ್ನು ಸರಿಯಾಗಿ ಗಮನಿಸುವಂತೆ ಮಾಡುವುದು ನಿಮ್ಮ ಜವಾಬ್ದಾರಿ.' ಐಸಿಎಸ್‌ಇ ಸಿಲೆಬಸ್ ಅನುಸರಿಸುವ ಶಾಲೆಯಿಂದಲೂ ಫೋನ್ ಬಂದಿದೆ. ಎರಡನೇ ತರಗತಿಯ ಆನ್‌ಲೈನ್ ಪಾಠ ಶುರು ಅಂತ. ಸ್ಪಷ್ಟವಾದ ಗುರಿಯಿರುವ ಜಾಣ ಮಕ್ಕಳಂತೂ ಕಂಪ್ಯೂಟರ್‌ನೊಳಗೆ ತಲೆತೂರಿಸಿ ಓದುತ್ತಿದ್ದಾರೆ. ಆನ್‌ಲೈನ್‌ನಲ್ಲಿ ಪ್ರಶ್ನೆಗಳ ಬಾಣಗಳನ್ನು ತೂರಿ ಎಲ್ಲವನ್ನೂ ಸ್ಪಷ್ಟಪಡಿಸಿಕೊಳ್ಳುತ್ತಾರೆ. ಆದರೆ ತುಂಟ ಮಕ್ಕಳ ಜವಾಬ್ದಾರಿ ಮತ್ತೆ ಅಮ್ಮ ಅಪ್ಪನ ಮಡಿಲಿಗೆ ಬಂದು ಬಿದ್ದಿದೆಯಲ್ಲ.

ಮನೆಯೊಳಗೆ ಎಲ್ಲರೂ ಹತ್ತಿರ ಹತ್ತಿರ ಬಂದಿದ್ದಾರೆ. ಅಪ್ಪ ಅಮ್ಮ ಆರಾಮಾಗಿ ಕುಳಿತಿರುವುದು ಮಕ್ಕಳಿಗೆ ಖುಷಿಯಾಗಿದೆ. ಅಪ್ಪ ಅಮ್ಮ ಬೆಳಗನ್ನು ಹೇಗೆ ಸ್ವಾಗತಿಸುತ್ತಿದ್ದಾರೆ ಎಂದು ಮಕ್ಕಳು ನೋಡುತ್ತಿದ್ದಾರೆಯೇ.. ಡಾನ್ಸ್ ಕ್ಲಾಸ್‌ನಲ್ಲಿ ತಾನು ಕಲಿಯಬೇಕು ಎಂದು ನಿರೀಕ್ಷೆ ಮಾಡಿದ ಸಂಸ್ಕಾರ ಮನೆಯಲ್ಲಿಲ್ಲವಲ್ಲ ಅಂತ ಮಗಳು ಅಚ್ಚರಿಪಡುತ್ತಿದ್ದಾಳೆಯೇ? ಟೈಮಿಲ್ಲ ಎನ್ನುತ್ತ ದೇವರ ಪೂಜೆ ತಪ್ಪಿಸಿಕೊಂಡು ಓಡುತ್ತಿದ್ದ ಈ ಅಪ್ಪ, ಆರಾಮಿದ್ದಾಗ ಪೂಜೆ ಮಾಡಬಹುದಲ್ಲ? ಹಾಗಿದ್ದರೆ ಆಫೀಸಿನ ಸೂತ್ರದೊಳಗೆ ಬಂಧಿಸಿಕೊಂಡಾಗಲೇ ಇವರೆಲ್ಲ ಆರಾಮಾಗಿದ್ದರೇ? ಮನೆಯವರೊಡನೆ ಇರಲು ಸಮಯವಿಲ್ಲ ಎನ್ನುತ್ತ ಬೇಸರಿಸಿಕೊಳ್ಳುತ್ತಿದ್ದ ಅಪ್ಪನಿಗೆ ಈ ಸಮಯವೇ ಭಾರವಾಗಿದೆಯೇ? ಯಾಕೆ ಅಪ್ಪ ಬಾಟಲಿಗಳನ್ನೆಲ್ಲ ಕಾರಿನ ಡಿಕ್ಕಿಯಲ್ಲಿ ಇರಿಸಿದ್ದಾರೆ? ಅಕ್ಕನಿಗೆ ಚಾಟ್ ಮಾಡಬೇಡ ಎನ್ನುವ ಅಮ್ಮ, ಟೆರೇಸ್‌ಗೆ ಹೋಗಿ ಪ್ರತ್ಯೇಕವಾಗಿ ಚಾಟ್ ಮಾಡುವಂತಹುದು ಏನಿದೆ? ಪುಟಾಣಿ ಮನಸ್ಸುಗಳ ತುಂಬಾ ಪ್ರಶ್ನೆಗಳ ಸರಮಾಲೆ. ಉತ್ತರಿಸಬೇಕಾದ ಅಪ್ಪ ಅಮ್ಮ ಹೀಗೇಕೆ ನಡೆದುಕೊಳ್ಳುತ್ತಾರೆ?

ಹೆತ್ತವರ ಜವಾಬ್ದಾರಿ ಎಂದರೆ ಸದಾ ದುಡಿದು ಸೌಕರ್ಯಗಳನ್ನು ಪೇರಿಸಿಟ್ಟುಕೊಳ್ಳುವುದೇ? ಬೇಕಾದ್ದನ್ನು ಕೊಡಿಸುತ್ತ, ನಿರೀಕ್ಷೆಯ ಮೂಟೆ ಹೊತ್ತು ಮಕ್ಕಳತ್ತ ನೋಡುವುದೇ?

ನಿರೀಕ್ಷೆಯನ್ನು ಸಾಕಾರಗೊಳಿಸಲು, ಶಾಲೆಯತ್ತ ಮುಖ ಮಾಡುವುದು, ಕ್ರೀಡೆ, ಕಲಾ ತರಗತಿಗಳಿಗೆ ಸೇರಿಸುತ್ತ, ಒಳ್ಳೆತನದ ಉಳಿಪೆಟ್ಟು ಅವರೇ ಕೊಡಲಿ ಎಂದು ಕಾಯುವುದಕ್ಕೆ ಲಾಕ್ ಡೌನ್ ಬ್ರೇಕ್ ಹಾಕಿದೆ. ನಿಮ್ಮ ಸಮಯ, ನಿಮ್ಮ ಜವಾಬ್ದಾರಿ – ಎನ್ನುತ್ತಿದೆ ಕಾಲ.

ಒಟ್ಟಾಗಿ, ಚೆಂದಾಗಿ, ಒಳ್ಳೆಯತನದಲ್ಲಿ ಬಾಳುವುದನ್ನು ಕಲಿಸುವುದಕ್ಕೊಂದು ತರಗತಿಯಿಲ್ಲ. ಅಪ್ಪ ಅಮ್ಮ ತಾವೇ ಹಾಗೆ ಬಾಳುವುದಷ್ಟೇ ಇರುವ ದಾರಿ.